(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದು ಅವಕಾಶ ನೀಡಿ ಪಾಟೀಸವಾಲನ್ನು ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**

**ದಿಃ-17-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು ಃ ಪ್ರತಿವಾದಿ ಪರ ಶ್ರೀ. ಎಸ್.ಆರ್.ಆರ್ ವಕೀಲರಿಂದ ಃ**

ನಿ.ಪಿ.18 ಖಾತಾವನ್ನು ನನಗೆ ಪ್ರತಿವಾದಿಯವರು ನೀಡಿರುತ್ತಾರೆ ಎಂದರೆ ಸರಿ. ಕರಾರು ಪತ್ರ ಆದ 1 ತಿಂಗಳಿನಲ್ಲಿ ನನಗೆ ಸ್ವತ್ತಿನ ದಾಖಲೆಗಳು ಬೇಕು ಎಂದು ನಾನು ಬ್ರೋಕರ್ ಗಳಲ್ಲಿ ಕೇಳಿರುತ್ತೇನೆ. ಈ ಬಗ್ಗೆ ನಾನು ಯಾವುದೇ ಬರವಣಿಗೆಯಲ್ಲಿ ನೀಡಿರುವುದಿಲ್ಲ. ನಿ.ಪಿ.1 ನ್ನು ತಿಳಿದುಕೊಂಡ ನಂತರ ಸಹಿಯನ್ನು ಹಾಕಿರುತ್ತೇನೆ. ಸಾಮಾನ್ಯವಾಗಿ ನಾನು ದಾಖಲೆಗಳನ್ನು ನೋಡಿದ ನಂತರ ಕರಾರು ಮಾಡುತ್ತೇನೆ. ನಿ.ಪಿ.1 ರಲ್ಲಿ 1 ತಿಂಗಳ ಒಳಗಡೆ ಸ್ವತ್ತನ್ನು ನೊಂದಣಿ ಮಾಡದೇ ಇದ್ದ ಪಕ್ಷದಲ್ಲಿ ಮುಂಗಡವಾಗಿ ನೀಡಿದ ಹಣವನ್ನು ಮುಟ್ಟುಗೋಲು ಹಾಕಬಹುದು ಎಂಬ ನಿಬಂಧನೆ ಅದರಲ್ಲಿ ನಮೂದಾಗಿದೆ ಎಂದರೆ ಸರಿ. ಈ ಕರಾರಿನಂತೆ ನಾವು ದಿನಾಂಕ **30.11.2014** ರ ಒಳಗಡೆ ಸ್ವತ್ತನ್ನು ನೊಂದಣಿ ಮಾಡಬೇಕಾಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವರು ದಾಖಲೆಗಳನ್ನು ನೀಡದೇ ಇದ್ದುದ್ದರಿಂದ ಆ ಅವಧಿಯ ಒಳಗಡೆ ಮಾಡಿಲ್ಲ ಎಂದು ನುಡಿಯುತ್ತಾರೆ. **30.11.2014** ರವಿವಾರವಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿ ರಮಾದೇವಿಯವರು ನನಗೆ ಒಂದು ಪತ್ರವನ್ನು ಬರೆದು ದಿನಾಂಕ **30.11.2014** ರವಿವಾರವಾಗಿದ್ದರಿಂದ ದಿನಾಂಕ **03.12.2014** ರಂದು ಸ್ವತ್ತನ್ನು ನೊಂದಣಿ ಮಾಡುವ ಎಂದು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಅದನ್ನು ನನಗೆ ನೊಂದಾಯಿತ ಅಂಚೆಯ ಮುಖಾಂತರ ಕಳುಹಿಸಿದ್ದರು ಎಂದರೆ ಸಾಕ್ಷಿಯು ಅದರಲ್ಲಿ ಬರೀ ರೆಂಟ್ ಅಗ್ರಿಮೆಂಟ್ ಮಾತ್ರ ಇತ್ತು ಎಂದು ನುಡಿಯುತ್ತಾರೆ. ನೊಂದಾಯಿತ ಅಂಚೆಯನ್ನು ನಾನು ಯಾವಾಗ ಸ್ವೀಕರಿಸಿದ್ದೆನು ಎಂದು ನನಗೆ ಗೊತ್ತಿಲ್ಲ. ಅವರು ಆ ಪತ್ರದಲ್ಲಿ ಹನುಮಂತನಗರದ ವಿಳಾಸವನ್ನು ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಯವರಿಗೆ ಹನುಮಂತನಗರದ ವಿಳಾಸಕ್ಕೆ ನೋಟೀಸು ಕಳಿಸಿದ್ದೇನೆ ಎಂದರೆ ಸಾಕ್ಷಿಯು ಅವರ **2** ವಿಳಾಸಕ್ಕೂ ಕಳಿಸಿದ್ದೇನೆ ಎಂದು ನುಡಿಯುತ್ತಾರೆ. ಅವರ ಯಾವ ವಿಳಾಸಕ್ಕೆ ನೋಟೀಸು ಜಾರಿಯಾಗಿದೆ ಎಂದು ಈಗ ನನಗೆ ನೆನಪಿಲ್ಲ. ಹನುಮಂತನಗರದ ವಿಳಾಸಕ್ಕೆ ಸಂಬಂಧಿಸಿ ನಾನು ಪ್ರತಿವಾದಿಯವರಲ್ಲಿ ಯಾವುದೇ ಪತ್ರ ವ್ಯವಹಾರ ಮಾಡಿಲ್ಲ. ನಿ.ಡಿ.**9** ರಲ್ಲಿರುವ ವಿಳಾಸವನ್ನು ಸ್ವತಃ ರಮಾದೇವಿಯವರು ನಿ.ಪಿ.**1** ಕರಾರು ಪತ್ರದಲ್ಲಿ ಬರೆಸಿದ್ದರು. ಕರಾರು ಪತ್ರದಲ್ಲಿ ಅವರ ವಿಳಾಸದಲ್ಲಿ **4** ನೇ ಟಿ ಬ್ಲಾಕ್ ಎಂದು ಬರೆದಿರುವುದಿಲ್ಲ ಎಂದರೆ ಸರಿ. ಅದರಲ್ಲಿ **33** ನೇ ಕ್ರಾಸ್ ಕೂಡ ಬರೆದಿರುವುದಿಲ್ಲ ಎಂದರೆ ಸರಿ. ರಮಾದೇವಿಯವರು **4** ನೇ ಟಿ ಬ್ಲಾಕ್, **33** ನೇ ಕ್ರಾಸ್‌ನಲ್ಲಿ ಇರುತ್ತಾರೆ ಎಂದು ಬ್ರೋಕರ್‌ರವರು ಅವರ ಮನೆಗೆ ಕರೆದುಕೊಂಡು ಹೋಗಿ ತೋರಿಸಿರುತ್ತಾರೆ. ಕರಾರು ಪತ್ರ ಆದ **10** ದಿನದ ಮೇಲೆ ನಾನು ಹಾಗೆ ಹೋಗಿರುತ್ತೇನೆ. ಹನುಮಂತನಗರದ ವಿಳಾಸದಲ್ಲಿ ಪ್ರತಿವಾದಿಯವರು ಇದ್ದಾರೆಯೇ ಇಲ್ಲವೇ ಎಂದು ನೋಡಲು ಹೋಗಿರುವುದಿಲ್ಲ ಕಾರಣ ಅವರು ಅಲ್ಲಿ ವಾಸವಾಗಿರುವುದಿಲ್ಲ.

**(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದು ಅವಕಾಶ ನೀಡಿ ಪಾಟೀಸವಾಲನ್ನು ಮುಂದೂಡಲಾಯಿತು).**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**